ISBN : 978-93-83813-42-1

ಕೆ.ಎಲ್.ಇ. ಸಂಸ್ಥೆಯ ಎಸ್.ಕೆ. ಕಲಾ ಮಹಾವಿದ್ಯಾಲಯ ಮತ್ತು
ಎಚ್. ಎಸ್. ಕೆ. ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ

# ಸ್ವಾತಂತ್ರ್ಯ ಸಂಗ್ರಾಮ ಮತ್ತು ಕನ್ನಡ ಸಾಹಿತ್ಯ

## Swaatantrya Sangraam & Kannada Saahitya..

(Papers Presented in International Seminar)



ಸಂಪಾದಕರು

ಡಾ. ವಿದ್ಯಾವತಿ ರಜಪೂತ
ಡಾ. ಎಸ್. ಟಿ. ಮೇರವಾಡೆ
ಡಾ. ಆರ್. ವಿ. ಪಾಟೀಲ
ಪ್ರೊ. ಬಿ. ಬಿ. ಡೆಂಗನವರ

# SWATANTRYA SANGRAMA AND KANNADA SAHITYA

Edited by : **Dr. Vidyavati Rajaput,** K.L.E.S.K.Arts College, Hubli. **Dr. R. V. Patil,** J.S.S. Degree College, Vidyagiri, Dharwad.

Publisher : Soumya Prakashana **BJP-F-27-2012-13**
Mahabaleshwar Colony, Vijayapura.

First Edition : 2018

© : Publisher's

Copies : 1000

Price : 150/-

Book Size : Demy 1/8

Paper Used : 70 gsm

ISBN : 978-93-83813-42-1

## ಸ್ವಾತಂತ್ರ್ಯ ಸಂಗ್ರಾಮ ಮತ್ತು ಕನ್ನಡ ಸಾಹಿತ್ಯ....

ಸಂಪಾದಕರು : ಡಾ. ವಿದ್ಯಾವತಿ ರಜಪೂತ, ಡಾ. ಆರ್. ವಿ. ಪಾಟೀಲ
: ಡಾ. ಬಿ. ಬಿ. ಡಂಗನವರ, ಡಾ. ಎಸ್. ಟಿ. ಮೇರವಾಡೆ

ಪ್ರಕಾಶಕರು : ಸೌಮ್ಯ ಪ್ರಕಾಶನ, ಬಿ.ಜೆ.ಪಿ.–ಎಫ್–27–2012–13
ಮಹಾಬಳೇಶ್ವರ ಕಾಲನಿ, ವಿಜಯಪುರ

ಮೊದಲ ಮುದ್ರಣ : 2018

ಹಕ್ಕುಗಳು : ಪ್ರಕಾಶಕರದ್ದು

ಪುಟಗಳು : X + 240

ಬೆಲೆ : 150/-

ಪ್ರತಿಗಳು : 1000

ಪುಸ್ತಕದ ಆಕಾರ : ಡೆಮಿ 1/8

ಬಳಸಿದ ಕಾಗದ : 70 ಜಿ.ಎಸ್.ಎಮ್.

ಮುಖಪುಟ ವಿನ್ಯಾಸ : ವಿನೋದ, ಧಾರವಾಡ

ಮುದ್ರಕರು : ಬಿ.ಜಿ. ಪ್ರಿಂಟರ್ಸ್, ಕ.ವಿ.ವ. ಸಂಘ ಕಾಂಪ್ಲೆಕ್ಸ್
ಧಾರವಾಡ, ಮೊ. 98452 70114

## ಪರಿವಿಡಿ


1. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಾಹಿತ್ಯಕಾರರ ಧ್ವನಿ 1
   ● ಡಾ. ಎಸ್. ಟಿ. ಮೇರವಾಡೆ
2. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಾಹಿತ್ಯದ ಕೊಡುಗೆ 5
   ● ಪ್ರದೀಪ ಎಂ. ಡಿ.
3. ಸಾಹಿತ್ಯ ಮತ್ತು ಪ್ರಕೃತಿ 12
   ● ಡಾ. ದಾಕ್ಷಾಯಣಮ್ಮ ಎಂ.
4. ಸ್ವಾತಂತ್ರ್ಯ ಚಳುವಳಿ ಮತ್ತು ಮುಸ್ಲಿಂ ಮಹಿಳೆಯರು 17
   ● ಡಾ. ಮುಮ್ತಾಜ್‌ಬೇಗಂ ಗಂಗಾವತಿ
5. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಕೊಡುಗೆ 22
   ● ಶ್ರೀಮತಿ ಶಶಿಕಲಾ ಎಸ್. ಆದೆಪ್ಪನವರ
6. ಜನಪದ ಸಾಹಿತ್ಯ: ಲಾವಣಿಗಳಲ್ಲಿ ಸ್ವಾತಂತ್ರ್ಯದ ಧ್ವನಿ 27
   ● ಸುಶೀಲಾದೇವಿ ಬಿ. ಬೇಟಗೇರಿ
7. ಕನ್ನಡ ಸಾಹಿತ್ಯದಲ್ಲಿ ರಾಷ್ಟ್ರೀಯತೆಯ ಸಂವೇದನೆ 33
   ● ಡಾ. ಹೆಚ್. ರಾಜೇಶ್ವರಿ
8. ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಸಾಹಿತ್ಯ ಹಾಗೂ ಪತ್ರಿಕೋದ್ಯಮ ಜನಪದ ಲಾವಣಿಗಳು : ಹೋರಾಟದ ಭಿನ್ನ ಬಗೆ 38
   ● ಡಾ. ಜ್ಯೋತಿ ನಾಗರಾಜ್ ಹೊಸೂರಕರ್
9. ಸ್ವಾತಂತ್ರ್ಯ ಸಂದರ್ಭದಲ್ಲಿ ಆಧುನಿಕತೆ 44
   ● ಶ್ರೀಮತಿ ಮೀನಾಕ್ಷಿ ಪಾಟೀಲ
10. ಸ್ವಾತಂತ್ರ್ಯ ಹೋರಾಟಗಾರ : ಪರಪ್ಪ ಸಂ. ಸಜ್ಜನ (ಬೇವೂರ) 49
   ● ಡಾ. ಜಿ. ಆಯ್. ನಂದಿಕೋಲಮಠ
11. ಸ್ವಾತಂತ್ರ್ಯ ಹೋರಾಟದಲ್ಲಿ ಪತ್ರಿಕೆಗಳ ಪಾತ್ರ 55
   ● ಡಾ. ಶೀಲಾದೇವಿ ಎಸ್. ಮಳೀಮಠ
   ● ಮಹೇಶ್ವರಿ ಜಿ. ಬಿ.
12. ಮಹಿಳಾ ಸ್ವಾತಂತ್ರ ಹೋರಾಟಗಾರ್ತಿ–ಸರೋಜಿನಿ ನಾಯ್ಡು 60
   ● ಶ್ರೀಮತಿ ಜಗದೇವಿ ಎಂ. ಕಲಶೆಟ್ಟಿ
13. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಾಹಿತ್ಯದ ಕೊಡುಗೆ 66
   ● ಶ್ರೀಮತಿ ಸವಿತಾ ಸಿ. ಸಿದ್ದೂನವರ

# ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಾಹಿತ್ಯಕಾರರ ಧ್ವನಿ

● ಡಾ. ಎಸ್. ಟಿ. ಮೇರವಾಡೆ

ಈಸ್ಟ-ಇಂಡಿಯಾ ಕಂಪನಿಯ ನೀತಿ ಹಾಗೂ ಇಂಗ್ಲೀಷರ ಆಳ್ವಿಕೆಯಿಂದ ಭಾರತದ ಧರ್ಮ, ಸಂಸ್ಕೃತಿ, ಅರ್ಥನೀತಿ ಮತ್ತು ಸಭ್ಯತೆ ಕುಗ್ಗಿತ್ತು. ಇಂತಹ ಸಂದರ್ಭದಲ್ಲಿ ಭಾರತದ ಸ್ವಾತಂತ್ರ್ಯ ಚಳುವಳಿ ಸಮಗ್ರ ಭಾರತವನ್ನು ವ್ಯಾಪಿಸಿಕೊಂಡು ಭಾರತೀಯರಲ್ಲಿ ದೇಶಾಭಿಮಾನದ ಕಿಡಿ ಹೊತ್ತಿಸಿತು. ಆಂಗ್ಲರ ಗುಲಾಮಗಿರಿಯಿಂದ ದೇಶವನ್ನು ಮುಕ್ತಗೊಳಿಸಬೇಕೆಂಬ ಏಕೈಕ ಗುರಿಗೆ ಇಡಿ ರಾಷ್ಟ್ರ ಸ್ಪಂದಿಸಿತು. ಎಲ್ಲರೂ ಒಗ್ಗೂಡಿದರು ಶ್ರೀಸಾಮಾನ್ಯರಾದಿಯಾಗಿ ಇತರೆ ನಾಗರಿಕರು ಸಲ್ಲಿಸಿದ ತ್ಯಾಗ ಬಲಿದಾನಗಳ ವೀರಗಾಥೆಯನ್ನು ಅವರು ನಂಬಿದ್ದ ಆದರ್ಶಗಳನ್ನು ಹೋರಾಟದ ಮಜಲಗಳನ್ನು ಭಾರತೀಯ ಜನಪದರು, ಶಿಷ್ಟಕವಿಗಳು ಜೊತೆ ಜೊತೆಯಲ್ಲಿ ಮೈದುಂಬಿ ಬರೆದು ಹಾಡಿದ್ದು ಅದೊಂದು ಪರ್ವಕಾಲ.

ನಾಟಕ, ಕಥೆ ಕಾದಂಬರಿಗಳೊಂದಿಗೆ ಪತ್ರಿಕೆಗಳು ಬಹಳಷ್ಟು ಕಾರ್ಯ ಮಾಡಿವೆ. ಪತ್ರಿಕೆಗಳು ಜನ-ಜಾಗೃತಿ ಮೂಡಿಸುವಲ್ಲಿ ಮಹತ್ವದ ಸಾಧನೆ ಸಹ ಮಾಡಿವೆ. ಒಬ್ಬ ಕವಿಯು ಹೀಗೆ ಹೇಳಿದ್ದಾನೆ –

**'ಖೀಂಚೋನ ಕಮಾನೋ ಕೊ ನ ತಲವಾರ ನಿಕಾಲೋ**

**ಅಬ್ ತೋಪ ಮುಕಾಬಲ ಹೋ ತೊ ಅಖಬಾರ ನಿಕಾಲೊ'**

ಅಂದರೆ ಬಂದೂಕಗಳ ಎಳೆಯಬೇಡಿರಿ, ಖಡ್ಗ ಸಹ ತೆಗೆಯಬೇಡಿರಿ ತೋಪುಗಳು ನಿಮಗೆ ಎದುರಾಳಿಯಾದರೆ ಪತ್ರಿಕೆಗಳನ್ನು ಆರಂಭಿಸಿ.

ಪತ್ರಿಕೆಗಳಿಗೆ ಅದ್ಭುತವಾದ ಶಕ್ತಿ ಇದೆ. ಅದು ಜನರನ್ನು ಎಚ್ಚರಿಸುವ ಕಾರ್ಯವು ಮಾಡುತ್ತದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪತ್ರಿಕೆಗಳ ಕೊಡುಗೆಯೂ ಅಪಾರವಾಗಿದೆ. ಸಮಾಜದ ಕೊರತೆಗಳು, ತಪ್ಪುಗಳು ಹಾಗೂ ಕುಕೃತ್ಯಗಳನ್ನು ಖಂಡಿಸಿ ಅವುಗಳನ್ನು ಸರಿಪಡಿಸುವ ಪ್ರಯತ್ನ ಮಾಡುವದರೊಂದಿಗೆ ಜನಜಾಗೃತಿ ಮೂಡಿಸುತ್ತವೆ. ಒಬ್ಬ ಪಾಶ್ಚಾತ್ಯ ನಾಟಕಕಾರ ತನ್ನ ಪಾತ್ರದ ಮುಖಾಂತರ ಹೀಗೆ ಹೇಳಿದ್ದಾನೆ – "ಒಬ್ಬ ಮನುಷ್ಯ ತನ್ನ ದೇಶವನ್ನು ಏಕೆ ಪ್ರೀತಿಸುತ್ತಾನೆ? ಏಕೆಂದರೆ ಅಲ್ಲಿ ರೊಟ್ಟಿ ರುಚಿಕರವಾಗಿರುತ್ತದೆ. ಗಾಳಿ ಸುಗಂಧವಾಗಿರುತ್ತದೆ. ಧ್ವನಿಗಳು ಹೆಚ್ಚು ಶಕ್ತವಾಗಿ ಕೇಳುತ್ತವೆ. ಆಕಾಶ ಬೇರೆಡೆಗಿಂತ ಎತ್ತರವಾಗಿರುತ್ತದೆ. ನೆಲದ ಮೇಲೆ ನಡೆಯುವದು ಇನ್ನು ಸುಲಭವಾಗಿರುತ್ತದೆ". ಮನೋವೈಜ್ಞಾನಿಕ ನೆಲೆಯಲ್ಲಿ ಇದು ಪೂರ್ಣ ಸತ್ಯ. ಮಾತೃಭೂಮಿಯನ್ನು ಅಲ್ಲಿಯ ಸಂಸ್ಕೃತಿ, ಕಲೆಗಳನ್ನು ಪ್ರೀತಿಸುವದು ಮನುಷ್ಯನ

ಸಹಜ ಸ್ವಭಾವ. ಆಂಗ್ಲರ ಬಗ್ಗೆ ಅಸಹ್ಯ ತಾಳಿ ಸ್ವಾತಂತ್ರ್ಯದ ಕನಸುಕಟ್ಟಿದ್ದು ಭಾರತೀಯರಲ್ಲಿ ನೈಜವಾಗಿ ವ್ಯಕ್ತವಾಗಿದೆ.

ಮಾತೃಭೂಮಿಯ ಮೇಲೆ ಪ್ರೀತಿ ಅಭಿಮಾನಗಳುಳ್ಳವರ ಪಾಲಿಗೆ ಅದು ಕೇವಲ ಭೌತಿಕ ಭೌಗೋಲಿಕ ಪ್ರದೇಶವಾಗಿ ಉಳಿಯುವುದಿಲ್ಲ. ಚಿನ್ಮಯ ಧಾಮವಾಗಿ, ಸಾಕ್ಷಾತ್ ಸ್ವರ್ಗವೇ ಆಗುತ್ತದೆ. ಅಭಿಮಾನ ಶೀಲರಾದ ಭಾರತೀಯರ ಕಣ್ಣಿಗೆ ಭಾರತ ಭೂಮಿ ಕೇವಲ ಮಣ್ಣಲ್ಲ. ಅದೊಂದು ವಿರಾಟ ಶಕ್ತಿಯಾಗಿರುತ್ತದೆ.

ಸಾಮಾನ್ಯರಲ್ಲಿ ರಾಷ್ಟ್ರಾಭಿಮಾನದ ಕಿಚ್ಚು ಪ್ರಜ್ವಲಿಸುವಂತೆ ಅನೇಕ ಜನಪದ ಹಾಗೂ ಲೋಕಗೀತೆಗಳನ್ನು ರಚಿಸಿ, ಹಾಡುತ್ತಿದ್ದರು. ವೀರಾವೇಶದಿಂದ ಲಾವಣಿ, ಗೀಗೀ ಪದಗಳು, ಲೋಕಗೀತೆಗಳಿಂದ ಜನರಲ್ಲಿ ದೇಶಾಭಿಮಾನದ ಸಂಚಲನವಾಗುತ್ತಿತ್ತು. ಈ ಕಾವ್ಯಗಳಲ್ಲಿ ಕಾವ್ಯದ ಗುಣ ಕಡಿಮೆಯಾದರೂ ಜನರ ಮನ ಮುಟ್ಟಿಸುವಲ್ಲಿ ಯಶಸ್ವಿಯಾಗಿದ್ದವು. 1920 ರ ಸುಮಾರಿಗೆ ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಭಾವ ಪ್ರವಾಹದ ಒಂದು ರಾಷ್ಟ್ರೀಯ ಆಯಾಮ ಪ್ರಾಪ್ತವಾಯಿತು. ದೇಶಾಭಿಮಾನವೇ ಆಗಿನ ಭಾವೋತ್ಕರ್ಷ. ತಮ್ಮ ತನು-ಮನ-ಧನವನ್ನೆಲ್ಲಾ ನಾಡಿಗಾಗಿ ಸಮರ್ಪಿಸಿ ರಾಷ್ಟ್ರಾಭಿಮಾನಿ ಭಾರತೀಯರ ಸ್ವಾತಂತ್ರ್ಯ ಪಡೆಯೇ ಬೃಹತ್ತಾಗಿ ನಿರ್ಮಾಣಗೊಂಡಿತು. ಅಂದಿನ ಸಂದರ್ಭದಲ್ಲಿ ಸ್ಪಂದಿಸಿದ ಕವಿಗಳ ಸಂಖ್ಯೆಯೂ ಅಗಣಿತವೇ ಆಗಿತ್ತು. ಹಿಂದಿ ಸಾಹಿತ್ಯದಲ್ಲಿ ಭಾರತೇಂದು ಯುಗ (ಜಾಗರಣಯುಗ), ಕನ್ನಡ ಸಾಹಿತ್ಯದಲ್ಲಿ ನವೋದಯದ ನೂತನ ಸಾಹಿತ್ಯದ ಚಟುವಟಿಕೆಗಳು, ಅದರ ಪೂರಕವಾದದ್ದು ಸ್ವಾತಂತ್ರ್ಯಾಂದೋಲನ. ಸಾಹಿತ್ಯದಲ್ಲಿ ಹೊಸ ಮಾರ್ಗ, ಭಾರತದಲ್ಲಿ ಠಿಕಾಣಿ ಹೂಡಿದ ಬ್ರಿಟೀಷರನ್ನು ಹೊಡೆದೋಡಿಸಿ ಸ್ವಾತಂತ್ರ್ಯ ಪಡೆಯುವ ಭಾರತೀಯರ ಅದಮ್ಯ ಹಂಬಲವೂ ಅಪ್ಪಟ ರಾಷ್ಟ್ರಾಭಿಮಾನ ಸ್ವಾತಂತ್ರ್ಯ ಹೋರಾಟದ ಸತ್ಯಾಗ್ರಹದ ನೂತನ ಮಾರ್ಗ.

ಹಿಂದಿ ಸಾಹಿತ್ಯದ ಭಾರತೇಂದು ಯುಗದ ಲೇಖಕರು ನಿರಂತರವಾಗಿ ಮಹಾಮಾರಿ, ಬರಗಾಲ, ತೆರಿಗೆ, ಆರ್ಥಿಕ ಸಂಕಟದ ಶೋಷಣೆಗೆ ಒಳಗಾಗಿದ್ದರು. ಈ ಸಂದರ್ಭದಲ್ಲಿ ಬ್ರಿಟೀಷರ ವಿರೋಧವಾಗಿ ಬಹಳಷ್ಟು ಸಾಹಿತ್ಯ ಹೊರಬಂದಿತು. ಅದರೊಂದಿಗೆ ಅನೇಕ ರಾಷ್ಟ್ರಪ್ರೇಮದ ಕಾವ್ಯಗಳು ರಚನೆಗೊಂಡವು. ಭಾರತೇಂದು ಹರಿಶ್ಚಂದ್ರ, ಪ್ರತಾಪನಾರಾಯಣ ಮಿಶ್ರ, ಅಂಬಿಕಾತನಯದತ್ತ, ವ್ಯಾಸ, ರಾಧಾಕೃಷ್ಣ ದಾಸ ಹಾಗೂ ಬದ್ರೀನಾಥ ಚೌಧರಿ ಮುಂತಾದವರು ತಮ್ಮ ಕಾವ್ಯಗಳ ಮುಖಾಂತರ ಬ್ರಿಟೀಷರನ್ನು ವಿರೋಧಿಸಿದರು. ಸ್ವಾತಂತ್ರ್ಯ ಸಂಗ್ರಾಮದ ಕಾರ್ಯ ಭಾರತೇಂದು ಯುಗದಲ್ಲಿ ಆರಂಭಗೊಂಡು ದ್ವಿವೇದಿ ಯುಗದಲ್ಲಿ ಪ್ರೌಢತೆ ಪಡೆಯಿತು. ಮಹಾವೀರ ಪ್ರಸಾದ ದ್ವಿವೇದಿ, ಹಜಾರಿ ಪ್ರಸಾದ ದ್ವಿವೇದಿ, ಹರಿಔಧ, ಮೈಥಿಲೀಶರಣ ಗುಪ್ತ, ಗಯಾ ಪ್ರಸಾದ ಶುಕ್ಲ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬ್ರಿಟೀಷರ ವಿರೋಧ

ವಿದ್ರೋಹದ ಧ್ವನಿ ಎತ್ತಿದರು. 1930 ರ ಆಸುಪಾಸಿಗೆ ಆರಂಭವಾದ ಛಾಯಾವಾದ ದಲ್ಲಿಯೂ ಪ್ರೌಢತೆಯ ಕಾವ್ಯಗಳು ಹೊರಬಂದವು. ಈ ಯುಗದಲ್ಲಿ ಸುಭದ್ರಾಕುಮಾರಿ ಚೌವ್ಹಾನ, ಭಗವತೀಚರಣ ವರ್ಮಾ, ಮಾಖನಲಾಲ ಚತುರ್ವೇದಿ, ಸುಮಿತ್ರಾನಂದನ ಪಂತ, ಪ್ರಸಾದ, ನಿರಾಲಾ, ಮಹಾದೇವಿವರ್ಮಾ, ರಾಮಕುಮಾರ ವರ್ಮಾ, ರಾಮಧಾರಿಸಿಂಹ ದಿನಕರ ಮುಂತಾದ ಕವಿಗಳು ತಮ್ಮ ಕಾವ್ಯದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಜಾಗೃತಿ ಮೂಡಿಸುವದರೊಂದಿಗೆ ಬ್ರಿಟೀಷರ ವಿರೋಧ ಕಠೋರವಾಗಿ ಬರೆದಿದ್ದಾರೆ.

ರಾಮಧಾರೀ ಸಿಂಹ ದಿನಕರ ಅವರ 'ಜನತಂತ್ರ ಕಾ ಜನ್ಮ' ಕಾವ್ಯದ ಶಬ್ದಗಳು ಹೀಗಿವೆ.

ಸದಿಯೋಂ ಕೀ ಥಂಡಿ ಬುಝಿ ರಾಖ ಜಗಮಗಾ ಉಠೀ,<br>
ಮಿಟ್ಟಿ ಸೋನೆ ಕಾ ತಾಜ ಪಹನ ಇಠಲಾತಿ ಹೈ.<br>
ದೋ ರಾಹ, ಸತ್ಯ ಕೇ ರಥ ಕಾ ಘರ ಘರ – ನಾದ ಸುನೋ<br>
ಸಿಂಹಾಸನ ಖಾಲಿ ಕರೋ ಕಿ ಜನತಾ ಆತೀ ಹೈ.

ಶತಮಾನಗಳ ಆರಿದ ತಂಪಾದ ಬೂದಿ ಜಗಮಗಿಸುತ್ತಿದೆ. ಮಣ್ಣು ಬಂಗಾರದ ಕಿರಿಟ ಧರಿಸಿ ಗರ್ವಿಸುತ್ತಿದೆ. ಎರಡು ದಾರಿಗಳ ಸತ್ಯರಥದ ಘರ–ಘರ ನಾದ ಕೇಳು, ಸಿಂಹಾಸನ ಖಾಲಿ ಮಾಡಿ ಜನ ಬರುತ್ತಾ ಇದ್ದಾರೆ.

ಹೋರಾಟಕ್ಕೆ ಭಾರತೀಯರನ್ನು ಪ್ರೇರೇಪಿಸುವುದೇ ಆಗಿನ ಭಾರತೀಯ ಕವಿಗಳ ಕಾವ್ಯದ ಮೂಲ ಉದ್ದೇಶವಾಗಿತ್ತು. ಕನ್ನಡದ ನವೋದಯ ಕವಿಗಳಲ್ಲಿ ಪ್ರಮುಖರಾದವರು ಈ ಪ್ರಭಾವೀ ಕಾರ್ಯವನ್ನು ಮಾಡಿದ ಉಜ್ವಲ ರಾಷ್ಟ್ರಾಭಿಮಾನಿಗಳ ಅನ್ಯರ ಕೈಗೆ ಸಿಕ್ಕ ನಾಡು ಆಕ್ರಾಂತವಾಗಿ ಆ ಬ್ರಿಟೀಷರು ತೊಡಿಸಿದ ಗುಲಾಮಗಿರಿಯ ಶೃಂಖಲೆಗಳಿಗೆ ಈ ಮಣ್ಣಿನ ಮೂಲ ಪುರುಷರೆಲ್ಲಾ ಸ್ಪಂದಿಸಿ ಆ ಪೈಶಾಚಿಕ ಪರಾಧೀನ ಅವಸ್ಥೆಯನ್ನು ಜನಮನಕ್ಕೆ ತಿಳಿಸಿದರು. ಅದರಲ್ಲಿ ಕನ್ನಡದ ಪಂಜೆ, ಬೇಂದ್ರೆ, ಕುವೆಂಪು ಮುಂತಾದವರು ಇದ್ದಾರೆ. ಇಲ್ಲಿ ಪಂಜೆಯವರ 'ಖಾದಿಗೀತೆ' ಉದಾಹರಣೆಗಾಗಿ ನೋಡಬಹುದು.

ದೇಶ ಬಂಧು..... ಬಿಡು..... ಬಿಡು....<br>
ಪರದೇಶದ ಬಟ್ಟೆ ಸುಡು.... ಸುಡು....<br>
ಸ್ವರ್ಣ ಧರಣಿಯಾ ಸ್ವರ್ಣವನೆಲ್ಲವ<br>
ಪೂರ್ಣ ವಿದೇಶೀ ವಸ್ತ್ರಕೆ ಕೊಡುವ<br>
ಕರ್ಣ ಕಠೋರ ವಿಚಾರವ ಸುಡು ...... ಸುಡು.....

ಇದೇ ರೀತಿಯಾಗಿ ನಾಲ್ವಡಿ ಶ್ರೀಕಂಠಶಾಸ್ತ್ರಿಗಳಂತೂ ತಮ್ಮ ಕವಿತೆಯಲ್ಲಿ ಸ್ಫೋಟಕ ರೀತಿಯ ವಾಕ್ಯಗಳನ್ನು ಬರೆದಿದ್ದಾರೆ.

ಉಡಬ್ಯಾಡಿ, ಉಡಬ್ಯಾಡಿ,
ಪರದೇಶದಿಂದ ಬಂದ –
ಜಿನಗಾದ ಧೋತರಾ :
ಸುಟ್ಟು ಹಾಕಿ ಸರ್ವರ –
ಹ್ಯಾಟು ಬೂಟು ನೆಕ್ ಟ್ಯಾಯ ಕಾಲಾರಾ

ಇಂತಹ ಅನೇಕ ದೇಶಾಭಿಮಾನದ ಕವಿತೆಗಳಿಂದ ಜನ ಜಾಗೃತಿ ಮೂಡಲಾರಂಭಿಸಿತು. ಕುವೆಂಪು ರಚಿಸಿದ 'ನೂರು ದೇವರನ್ನೆಲ್ಲಾ ನೂಕಾಚೆ ದೂರ, ಭಾರತಾಂಬೆಯನಿಂದು ಪೂಜಿಸುವ ಬಾರಾ!' ಕೂಡಾ ಆ ಸಮಯದ ಉಜ್ವಲ ದೇಶಪ್ರೇಮದ ಗೀತೆಯಾಗಿ ಮೂಡಿಬಂದಿದೆ. ಕವಿ ಕಯ್ಯಾರ ಕಿಞ್ಞಣ್ಣ ರೈ ಅವರ 'ಐಕ್ಯಗಾನ' ಸ್ವಾತಂತ್ರ್ಯ ಹೋರಾಟದ ಭಾವನಾತ್ಮಕ ಸನ್ನಿವೇಶದಲ್ಲಿ ಮೂಡಿಬಂದ ಕಾವ್ಯ. ಆ ಕಾವ್ಯದ ಶಬ್ದಗಳು–

ಐಕ್ಯವೊಂದೇ ಮಂತ್ರ
ಐಕ್ಯದಿಂದ ಸ್ವತಂತ್ರ
ಐಕ್ಯಗಾನದಿ
ರಾಷ್ಟ್ರತೇಲುತಿರಲಿ,
ಭಾರತದಿ ಮರುಜನ್ಮ
ಸ್ವಾತಂತ್ರ್ಯವೇ ಧರ್ಮ
ಒಕ್ಕೊರಲಿನುದ್ಘೋಷ
ಕೇಳುತಿರಲಿ

ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ಈ ದೇಶದ ಜನರೆಲ್ಲ ಗಂಡು, ಹೆಣ್ಣು, ಕುಲ, ಮತ ಎನ್ನದೆ ಸಿದ್ಧರಾಗಿ ಧ್ವಜವೆತ್ತಿ ನಡೆದಾಗ ಆಂಗ್ಲರು ಓಡಿಹೋಗಿದ್ದು ಅದೊಂದು ಇತಿಹಾಸ.

ಹಿಂದಿ ವಿಭಾಗ, ಎಸ್. ಬಿ. ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯ, ವಿಜಯಪುರ.
ಮೊ– 9448185705